ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

Bangalore Development Authority

000003

ಸಂಖ್ಯೆ: ಬೆಂಅಪ್ರಾ/ಆಯು/ಉ.ಕಾ(ಸಿ)/795/2017-18 ದಿನಾಂಕ: 24.10.2017

ಜಾ ಹೀರಾ ತು

ವಿಷಯ:- ಸೇವಾ ವಿಷಯದಲ್ಲಿ ಅನುಭವವುಳ್ಳವರನ್ನು ಗುತ್ತಿಗೆ ಆಧಾರದ ಮೇಲೆ ಸಮಾಲೋಚಕರಾಗಿ ನೇಮಿಸುವ ಬಗ್ಗೆ.

*****

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಶೀಲಿಸುವ ಹಾಗೂ ಇತರೆ ಸೇವಾ ವಿಷಯಗಳಲ್ಲಿ ಅನುಭವವುಳ್ಳ ನುರಿತವರುಗಳಿಂದ ಗುತ್ತಿಗೆ ಆಧಾರದ ಮೇಲೆ ಸಮಾಲೋಚಕರಾಗಿ ಕೆಲಸ ನಿರ್ವಹಿಸಲು ಆಸಕ್ತಿವುಳ್ಳವರಿಂದ ಈ ಜಾಹಿರಾತು ಪ್ರಕಟಗೊಂಡ ಏಳು ದಿವಸಗಳೊಳಗಾಗಿ ಅರ್ಜಿಯನ್ನು ಆಹ್ವಾನಿಸಿದೆ. ಹೆಚ್ಚಿನ ವಿವರಗಳಿಗೆ ಪ್ರಾಧಿಕಾರದ ಅಧಿಕೃತ ಅಂತರ್‌ಜಾಲ www.bdabangalore.org ಅನ್ನು ಸಂಪರ್ಕಿಸಿ.

ಆಯುಕ್ತರು
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

ಸಲಹೆಗಾರರಾಗಿ / ಸಮಾಲೋಚಕರಾಗಿ ನಿರ್ವಹಿಸಬೇಕಾದ ಕರ್ತವ್ಯಗಳು.

1. ಪ್ರಾಧಿಕಾರದ ಎಲ್ಲಾ ಅಧಿಕಾರಿಗಳ / ಸಿಬ್ಬಂದಿಯ ಸೇವಾ ವಿಷಯಗಳಲ್ಲಿ ಸಲಹೆಗಳನ್ನು ನಿಡುವುದು.
2. ಪ್ರಾಧಿಕಾರದ ಎಲ್ಲಾ ಅಧಿಕಾರಿಗಳ / ಸಿಬ್ಬಂದಿಯ ಸೇವಾ ಜೆಷ್ಠತಾ ಪಟ್ಟಿಗಳನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯಗಳ ಆದೇಶಗಳ ಮೇರೆಗೆ ಕರಡನ್ನು ತಯಾರಿಸುವುದು.
3. ಪ್ರಾಧಿಕಾರದ ಕಾರ್ಯಾಧ್ಯಯನ ಕರಡು ವರದಿಯನ್ನು ತಯಾರಿಸುವುದು.
4. ಮಾಹಿತಿ ಹಕ್ಕು ಅಧಿನಿಯಮ 2005 ರ ಪ್ರಕರಣಗಳಲ್ಲಿ ಸಲಹೆ ನೀಡುವುದು.
5. ಪ್ರಾಧಿಕಾರದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಿ ಕರಡನ್ನು ತಯಾರಿಸುವುದು.
6. ವಿಧಾನ ಮಂಡಲದ ಪ್ರಶ್ನೆಗಳಿಗೆ ಉತ್ತರಗಳನ್ನು / ಸೂಚನೆಗಳಿಗೆ ವರದಿಗಳನ್ನು ತಯಾರಿಸಲು ಸಹಕರಿಸುವುದು.
7. ಇಲಾಖಾ ವಿಚಾರಣೆಗಳನ್ನು / ಲೋಕಾಯುಕ್ತ ವಿವಾರಣೆಗಳಲ್ಲಿ ಆರೋಪ ಪಟ್ಟಿಗಳನ್ನು ತಯಾರಿಸುವಲ್ಲಿ ಸಹಕರಿಸುವುದು.
8. ಪ್ರಾಧಿಕಾರವು ಆದೇಶಿಸಿದಲ್ಲಿ ಇಲಾಖಾ ವಿಚಾರಣೆಗಳ ವಿಚಾರಣಾಧಿಕಾರಿಗಳ ಕರ್ತವ್ಯ ನಿರ್ವಹಿಸುವುದು.
9. ಪ್ರಾಧಿಕಾರದ ಆಯುಕ್ತರು / ಕಾರ್ಯದರ್ಶಿಗಳು ಸೂಚಿಸಿರುವ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560020
T. Chowdaiah Road, Kumarapark West, Bangalore 560020, Facsimile: 23345799, E-mail: bda@vsnl.com